ವಿಧಾನ ಮಂಡಲದ ಉಭಯ ಸದನಗಳನ್ನುದ್ದೇಶಿಸಿ ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಅಧಿಕೃತ ವರದಿ

ಸನ್ಮಾನ್ಯ ರಾಜ್ಯಪಾಲರಾದ ಶ್ರೀ ಖುರ್ಷೀದ್ ಅಲಂ ಖಾನ್‌ರವರು ಶುಕ್ರವಾರ, 21ನೇ ಫೆಬ್ರವರಿ 1992ರಂದು ಸಂಜೆ 4 ಗೆಂಟೆಗೆ ವಿಧಾನಸೌಧದಲ್ಲಿರುವ ವಿಧಾನಸಭಾ ಸದನದಲ್ಲಿ ಸಮಾವೇಶಗೊಂಡ ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ ಮಾಡಿದ ಭಾಷಣ.

ಮಾನ್ಯ ರಾಜ್ಯಪಾಲರು ಸಂಜೆ 3.55 ಗಂಟೆಗೆ ಸರಿಯಾಗಿ ವಿಧಾನಸೌಧದ ಮುಖ್ಯದ್ವಾರದ ಬಳಿ ಇರುವ ದ್ವಾರಮಂಟಪಕ್ಕೆ ಆಗಮಿಸಿದರು. ರಾಜ್ಯಪಾಲರು ತಮ್ಮ ಕಾರಿನಿಂದ ಇಳಿದ ಬಳಿಕ ಅವರನ್ನು ಮಾನ್ಯ ಅಧ್ಯಕ್ಷರವರು, ಮಾನ್ಯ ಸಭಾಪತಿಯವರು ಮತ್ತು ವಿಧಾನಮಂಡಲದ ಕಾರ್ಯದರ್ಶಿಯವರು ಸ್ವಾಗತಿಸಿದರು. ನಂತರ ಪೂರ್ವ ಭಾಗದಲ್ಲಿರುವ ಲಿಫ್ಟ್‌ಗೆ ರಾಜ್ಯಪಾಲರನ್ನು ಕರೆದೊಯ್ಯಲಾಯಿತು. ಮೊದಲನೆಯ ಮಹಡಿಯಲ್ಲಿ ಲಿಫ್ಟ್‌ನಿಂದ ಹೊರಬಂದ ಬಳಿಕ ಈ ಕೆಳಕಂಡ ಕ್ರಮದಲ್ಲಿ ಮೆರವಣಿಗೆಯನ್ನು ರೂಪಿಸಲಾಯಿತು.

ಕಾರ್ಯದರ್ಶಿಯವರು

ಮಾನ್ಯ ಅಧ್ಯಕ್ಷರು **ಮಾನ್ಯ ಸಭಾಪತಿಯವರು**

ರಾಜ್ಯಪಾಲರು

ಎ.ಡಿ.ಸಿ

ಈ ರೀತಿ ಮೆರವಣಿಗೆಯು ವಿಧಾನಸಭೆಯ ಸಭಾಂಗಣದ ಕಡೆಗೆ ಹೊರಟಿತು. ಸಭಾಂಗಣದ ದ್ವಾರದ ಬಳಿ ಮೆರವಣಿಗೆ ಬಂದಕೂಡಲೇ ಮಾನ್ಯ ರಾಜ್ಯಪಾಲರ ಆಗಮನವನ್ನು ಮಾರ್ಷಲ್ ಅವರು ಸಭೆಗೆ ತಿಳಿಸಿದರು. ನಂತರ ರಾಷ್ಟ್ರಗೀತೆಯನ್ನು ನುಡಿಸಲಾಯಿತು. ರಾಜ್ಯಪಾಲರು ಸದನವನ್ನು ಪ್ರವೇಶಿಸಿ ವೇದಿಕೆಯ ಮೇಲೆ ಕುಳಿತುಕೊಳ್ಳುವ ತನಕ ಮಾನ್ಯ ಸದಸ್ಯರುಗಳು ಎದ್ದುನಿಂತುಕೊಂಡಿದ್ದರು.

ಮೇಲಿನ ಕ್ರಮದಲ್ಲಿ ಮೆರವಣಿಗೆಯು ಸಭಾಂಗಣದ ವೇದಿಕೆಯ ಮುಂಭಾಗಕ್ಕೆ ಬಂದ ಬಳಿಕ ಇಬ್ಭಾಗವಾಯಿತು. ವೇದಿಕೆಯ ಮೇಲೆ ಮಾನ್ಯ ಅಧ್ಯಕ್ಷರವರು ಮಾನ್ಯ ರಾಜ್ಯಪಾಲರ ಬಲಭಾಗದಲ್ಲಿಯೂ, ಮಾನ್ಯ ಸಭಾಪತಿಯವರು ರಾಜ್ಯಪಾಲರ ಎಡಭಾಗದಲ್ಲಿಯೂ ಕುಳಿತು ಕೊಂಡರು. ರಾಜ್ಯಪಾಲರು ವೇದಿಕೆಯ ಮಧ್ಯಭಾಗದಲ್ಲಿರುವ ಆಸನದಲ್ಲಿ ಕುಳಿತುಕೊಂಡರು. ವಿಧಾನಮಂಡಲದ ಇಬ್ಬರು ಕಾರ್ಯದರ್ಶಿಗಳು ವೇದಿಕೆಯ ಮುಂಭಾಗದಲ್ಲಿರುವ ತಮ್ಮ ಆಸನಗಳಲ್ಲಿ ಕುಳಿತುಕೊಂಡರು.

ರಾಜ್ಯಪಾಲರ ಭಾಷಣ

ಶ್ರೀ ವಾಟಾಳ್ ನಾಗರಾಜ್ : ಸನ್ಮಾನ್ಯ ರಾಜ್ಯಪಾಲರೇ, ನಾನು ತಮ್ಮಲ್ಲಿ ಅತ್ಯಂತ ವಿನಯದಿಂದ ಪ್ರಾರ್ಥನೆ ಮಾಡುತ್ತಿದ್ದೇನೆ. ತಾವು ಕನ್ನಡಭಾಷೆಯಲ್ಲಿ ತಮ್ಮ ಭಾಷಣವನ್ನು ಆರಂಭಿಸಿ ಸಂಪೂರ್ಣವಾಗಿ ಕನ್ನಡದಲ್ಲೇ ಮಾತನಾಡಬೇಕೆಂದು ನಾನು ಬಹಳ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.....

ಸನ್ಮಾನ್ಯ ರಾಜ್ಯಪಾಲರು : ಸನ್ಮಾನ್ಯ ಸಭಾಪತಿಯವರೇ, ಸಭಾಧ್ಯಕ್ಷರೇ ಮತ್ತು ಸದಸ್ಯರೇ,

ರಾಜ್ಯ ವಿಧಾನಮಂಡಲದ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮತ್ತೊಮ್ಮೆ ಭಾಷಣ ಮಾಡಲು ನನಗೆ ಅತೀವ ಸಂತೋಷವಾಗುತ್ತಿದೆ....

(ಬೆಳಗಾಂ ಜಿಲ್ಲೆಯ ಪಕ್ಷೇತರ ಸದಸ್ಯರು ಎದ್ದುನಿಂತು)

.....This Government has not shown any interest in solving the boundary dispute...' ಎಂದು ಘೋಷಣೆ ಕೂಗತೊಡಗಿದರು)

'We demand that the Central Government should immediately intervene)

ಶ್ರೀ ವಾಟಾಳ್ ನಾಗರಾಜ್ : ಮಹಾಜನ್ ವರದಿ ಬಿಟ್ಟು ಬೇರೆ ಮಾತೇ ಇಲ್ಲ.

("ಸಂಯುಕ್ತ ಮಹಾರಾಷ್ಟ್ರ ಜಾಲಾತ್ ಫಾಯಿಜೆ" ಎಂದು ಕೂಗುತ್ತಾ ಪಕ್ಷೇತರ ಸದಸ್ಯರು ಸಭಾತ್ಯಾಗ ಮಾಡಿದರು)

The past one year of my tenure as Governor of this beautiful and progressive State has been quite enlightening and useful.

2. I am very proud to state that my Government has sincerely and purposefully implemented the policies and programmes to which I had given special stress in my last address, for the upliftment of the poorer sections of the society and to bring in a satisfactory standard of living to the people of the State. Particularly those who live in villages. My Government believes that the welfare of the people of the State and their social, cultural and economic development depends mainly on the development of the rural areas and on the social and cultural awakening of the rural people. It is with this knowledge that my Government's policies and programmes are primarily oriented to the said sections of the society, which constitute a majority of the State's population.

3. The general elections to the Tenth Loksabha were held in by and large a very peaceful atmosphere and we have presently a stable Government under the able and experienced leadership of Shri P.V. Narasimha Rao. The Country has once again demonstrated its maturity in parlimentary democracy. However, we are shaken by the untimely and tragic demise of our dynamic and beloved leader Shri Rajiv Gandhi, in the midst of general elections.

4. During the last year, the State has experienced heavy rainfall and loss of property in floods in some parts and drought conditions in few other areas. My Government has taken action to provide relief to the flood victims and reconstruct damaged houses belonging to economically weaker sections of the society and has undertaken adequate relief works in the drought affected areas.

(ಮುಂದಲ)

ಶ್ರೀ ವಾಟಾಳ್ ನಾಗರಾಜ್ : ನಾನು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಈ ಕಾವೇರಿ ಸಮಸ್ಯೆ ಬಗ್ಗೆ ಇತ್ತೀಚಿನ ದಿವಸಗಳಲ್ಲಿ ಭಯಂಕರವಾದಂಥ ಒಂದು ದೊಡ್ಡ ಅಂದೋಳನ ಕರ್ನಾಟಕದಲ್ಲಿ ನಡೆದಿದೆ. ನ್ಯಾಯಮಂಡಳಿಯ ಮಧ್ಯಂತರ ಆಜ್ಞೆ ಸಂಪೂರ್ಣವಾಗಿ ಮರಣಶಾಸನವಾಗಿದೆ. ತಮಿಳುನಾಡಿನಲ್ಲಿ ಕನ್ನಡಿಗರಿಗೆ ಸೇರಿದ ಆಸ್ತಿಪಾಸ್ತಿಗಳನ್ನು ಲೂಟಿ ಮಾಡಿದ್ದಾರೆ. ಇದರ ಬಗ್ಗೆ ನ್ಯಾಯಾಂಗ ತನಿಖೆ ಆಗಬೇಕು. ಇದರಿಂದ ಬಹಳ ಅನ್ಯಾಯವಾಗಿದೆ. ತಮಿಳುನಾಡಿನಲ್ಲಿ ಕನ್ನಡಿಗರಿಗೆ ರಕ್ಷಣೆ ಇಲ್ಲ. 325ಕೋಟಿ ರೂಪಾಯಿಗಳಷ್ಟು ಕನ್ನಡಿಗರಿಗೆ ಸೇರಿದ ಆಸ್ತಿಪಾಸ್ತಿಗಳ ನಷ್ಟವಾಗಿದೆ. ಎರಡು ಲಕ್ಷ ಕನ್ನಡಿಗರು ತಮಿಳುನಾಡಿನಿಂದ ಕರ್ನಾಟಕ್ಕೆ ಬಂದಿದ್ದಾರೆ. ತಮ್ಮ ಸರ್ಕಾರದ ವಿರುದ್ಧ ನಾನು ಪ್ರತಿಭಟನೆ ಮಾಡುತ್ತಿದ್ದೇನೆ. ದಯವಿಟ್ಟು ತಾವು ಕನ್ನಡದಲ್ಲಿ ಮಾತನಾಡಿ. ಇದು ಸರಿಯಾದ ನೀತಿ ಅಲ್ಲ....

(ಅತೀವ ಗೊಂದಲ ಮಾನ್ಯ ರಾಜ್ಯಪಾಲರು ಅಡೆತಡೆಯಿಲ್ಲದೆ ತಮ್ಮ ಭಾಷಣವನ್ನು ಓದುತ್ತಲೇ ಇದ್ದರು. ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ಅವರು ಕಪ್ಪುಬಟ್ಟೆಯನ್ನು ಬಾವುಟದಂತೆ ಬೀಸಿ ಪ್ರತಿಭಟಿಸತೊಡಗಿದರು)

5. The interim order of the Cauvery Water Disputes Tribunal and its publication in the Gazette created strains on the law and order machinery of the State. While the people of the State Demonostracted their solidarity in protecting the interests of the farmers of the Cauvery basin area, there were, unfortunately, a few incidents in a few places in Karnataka. My Government believes in the fact that such acts of violence cannot and will not solve any problem and accordingly is equipping itself to prevent their recurrence. The State has all along been of the view that these river water disputes can best be resolved by mutual discussions and negotiations. My Government is grateful to the Hon'ble Prime Minister for having initiated talks in this regard and to the Hon'ble Chief Ministers of concerned states for having participated in the discussions held in an atmosphere of mutual understanding. My Government is also hopeful that a lasting solution/long-term agreement satisfactory to all the States will be arrived at soon, in the interest of the farmers of all the States and utilisation of Cauvery Waters as a national asset, by all the States adopting a conciliatory approach.

My Government reiterates that it will render all assistance and support to the efforts of the Hon'ble Prime Minister in finding an amicable agreement and assures the people of Karnataka that it will continue to do everything in its command to protect the interests of the farmers of Cauvery Basin area. My Government wishes to place on record its appreciation of the unstinted co-operation rendered by all the political parties and all sections of the society on the Cauvery issue. My Government is hopeful of their continued support and co-operation and is committed to act unitedly in future also.

6. I must make a special mention of the valuable support by Hon'ble Members in successful implementation of the Programmes like "Ashraya", "Akshaya", "Aradhana" etc., which have been conceived for the poorer sections of the society. I am confident that, the Hon'ble Members will continue to be actively associated in the formulation and execution of further programmes towards the State's Development.

7. The State's Performance in implementing plan schemes has been appreciated by the Planning Commission, notably the State's fiscal management and efforts on resource mobilisation and utilising these resources for overall development of the State. My Government is committed to continue its efforts in this direction, and strive for large plan investments. The areas which will receive priority consideration are–Agriculture, Irrigation, Power generation, Industry, Health and Education.

8. It is a matter of great concern to all of us that in the decade of 1980-90, the State has witnessed a decline in the productivity of the agricultural sector, in almost all the crops. This situtation calls for immediate and effective remedical measures. My Government therefore proposes to take up, on top-most priority, the sector of Agricultural development in all its aspects. My Government has targetted production of 82 lakhs tonnes of foodgrains both for kharif and rabi. Inspite of heavy rains in some parts of the State and drought conditions in some other parts, the state is confident of achieving this target. My Government believes that the farmers in the State are in need of continued guidance, support and assistance from the State Government and its agencies to accelerate agricultural production and to imporve productivity. My Government has, therefore, decided to provide more incentives to the farmers, in addition to creating and augmenting the very basic infrastructural facilities of Soil testing, Minor Irrigation, supply of improved seeds, Modernised Agricultural Implements, and adoption of modern water management concepts like Drip irrigation and Sprinkler Irrigation. My Government is already in the process of formulating detailed schemes in these areas.

9. My Government proposes to utilise, to the optimum extent, the skills and the facilities that the people have developed over the years in certain specialised areas of agriculture. My Government accordingly proposes to strengthen further the development base of Sericulture, Horticulture and Forest Sectors. For this purpose, my Government intends to pay special attention towards higher education in these areas and purposes to open a Sericulture College in Kolar District and a Forest College in Kodagu district. These Colleges will provide specialised education to the students of the State who

will be the basic resources material for the various developmental schemes in these areas in future.

(ಜನತಾದಳ, ಭಾರತೀಯ ಜನತಾಪಕ್ಷ, ಸಮಾಜವಾದಿ ಜನತಾಪಕ್ಷದ ಸದಸ್ಯರು ಎದ್ದುನಿಂತು ಘೋಷಣೆಯನ್ನು ಕೂಗಲು ಪ್ರಾರಂಭಿಸಿದರು. "ರೈತ ವಿರೋಧಿ ಸರ್ಕಾರಕ್ಕೆ ಧಿಕ್ಕಾರ' 'ಅಬ್ಕಾರಿ ದೊರೆಗಳಿಗೆ ಧಿಕ್ಕಾರ' 'ಸಾಲಮನ್ನಾ ಮಾಡದ, ಕಾವೇರಿ ಸಮಸ್ಯೆ ಬಗೆಹರಿಸದ, ಅಬಕಾರಿ ಗುತ್ತಿಗೆದಾರರಿಗೆ ಮಣಿದಿರುವ ಸರ್ಕಾರಕ್ಕೆ ಧಿಕ್ಕಾರ' 'ರೈತ ವಿರೋಧಿ ಸರ್ಕಾರಕ್ಕೆ ಧಿಕ್ಕಾರ' ಮುಂತಾದ ಘೋಷಣೆಗಳನ್ನು ಹಾಕುತ್ತಿದ್ದರು. (ಸಭೆಯಲ್ಲಿ ಅತೀವ ಗೊಂದಲ).

(ರಾಜ್ಯಪಾಲರು ತಮ್ಮ ಭಾಷಣವನ್ನು ಮುಂದುವರೆಸಿದ್ದರು...)

ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್ ಅವರು ರಾಜ್ಯಪಾಲರ ಭಾಷಣದ ಪ್ರತಿಯನ್ನು ಹರಿದು ಹಾಕಿದರು. ನಂತರ ಮುಸ್ಲಿಂ ಲೀಗ್‌ನ ಸದಸ್ಯರಾದ ಶ್ರೀ ಕಮರುಲ್ ಇಸ್ಲಾಂ ಅವರನ್ನು ಹೊರತುಪಡಿಸಿ ಉಳಿದೆಲ್ಲ ವಿರೋಧ ಪಕ್ಷದ ಸದಸ್ಯರಾದ ಘೋಷಣೆಗಳನ್ನು ಕೂಗುತ್ತಾ ಸಭೆಯಿಂದ ನಿರ್ಗಮಿಸಿದರು. ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ಅವರು ಮಾತ್ರ ಕಪ್ಪು ಬಟ್ಟೆ ಪ್ರದರ್ಶಿಸುತ್ತ ರಾಜ್ಯಪಾಲರ ಪೀಠದ ಮುಂದೆ ಎಡಭಾಗದಲ್ಲಿ ಕುಳಿತುಕೊಂಡು ಘೋಷಣೆ ಕೂಗುತ್ತಿದ್ದರು)

10. The Hon'ble Members are aware that the state is required to utilise its share of waters of Krishna basin by the year 2000 A.D. Many projects have, therefore, been taken up in the Krishna basin and are under various stages of execution, with assistance from the World Bank. However, my Government has realised that there is a need for better co-ordination among the various agencies involved in these projects for faster implementation of the works and better utilisation of water. In order to achieve all these, my Government has decided to set up an autonomous Krishna Basin Development Authority which will be entrusted with the responsibility of planning, execution, operating and maintaining of all Major, Medium and Minor Irrigation projects in the Krishna Basin and also comprehensive develpment of the Command Areas. My Government will make all efforts to utilise its share within 2000 A.D.

11. Realising the critical role of power development in the State's progress, both in the agricultural and industrical sectors, my Government had announced its policy to invite private sector participation in power generation. I am very happy to announce that on this basis a few mini-hydel projects have already been given to the private sector for implementation. Many large hydel power projects have already been identified and my Government proposes to implement them at the earliest. The State owned Karnataka Power Corporation is being entrusted with the execution of many of these projects. Yet, my Government considers that it is necessary to associate the private sector even in the large hydel power projects. Accordingly, my Government has decided to take up

these projects in the public, private and joint sector with the objective of their early completion on technically sound and modern lines, and achieving self-sufficiency in power generation by 2000 A.D. For this purpose, the Karnataka Electricity Board will have a "banking" arrangement with power-reducing entrepreneurs in the private-sector under which they can themselves utilise power in locations of their choice.

12. Another area of concern of my Government is the provision of adequate road transport facilities to the people. The Karnataka State Road Transport Corporation has, all along, been the main-stay of road transport in the State. The KSRTC has been rendering service with its fleet of about 9000 vehicles, 226 bus stations and hundreds of rural way-side bus shelters. It has many ambitious plans to provide more services and also passengers facilities like more bus station and shelters during the next year. My Government, however, feels that still more and better bus transport services are necessary to improve better quality of service in the interest of travelling public. My Government also purposes to instill competition in the bus transport operations. Based on traffic surveys already conducted, a large number of routes and areas, both urban and rural, will now be offered to the private-sector for operations.

13. The "VISHWA" programme, which was inaugurated on 2nd October 1991 by the Hon'ble Prime Minister has made tremendous progress. The Scheme is aimed at providing continuous productive employment to the rural population. My Government is aware that the success of the scheme depends on continuous and consistent support and monitoring by the Government at the highest level.

14. My Government intends to have a policy of selective privatisation of public-sector industries and enterprises. The intention is to see that the Government disinvests its shares in continuously loss-making units and in units which are engaged in activities that are not in the domain of a Welfare State and where the private sector has become strong. This will save the Government from the burden of supporting such enterprises and undertakings through its scarce resources and will enable the Government to deploy the proceeds of such disinvestment in the Welfare Programme for the poor.

15. My Government is of the conviction that the quality of life in the state cannot improve inspite of the various developmental programmes and activities unless the growth of population is effectively checked. The National Development Council in its last meeting accepted my Government's suggestion

that there should be a national concensus on the measures of population control and that efforts in this direction should be made by all political parties.

16. My Government has initiated "Pancha Sutra" comprising simplification of procedure, delegation of authority, public accountability, monitoring from village to State level and redressal of public grievances. My Government has introduced the Karnataka Administrative Procedure Bill before both the Houses of Legislature and it is now before the joint Select Committee. My Government intends to make the administration more responsive by clearly redefining the structure and the functions of various administrative authorities. In order to provide faster service to the people , my Government proposes to provide a judicial review service, against orders which are quasi-judicial in nature, at the District level itself by establishing District Appellate Tribunals. These District Appellate Tribunals will hear appeals and revisions against the statutory orders passed by officers of different departments in the District.

17. My Government is aware of the felt need of the people in rural areas for burial grounds. My Government is initiating a scheme for forming burial grounds in the villages which are now deprived of such amenities.

18. Despite the constitutional and legal safeguards and the economic measures taken for the advancement of Schedules Castes and Schedules tribes, atrocities against them have continued to occur in occasional cases. These include bonded labour, caste prejudice, non-payment of minimum wages and deprivation of jobs inspite of the prescribed requirements of job-reservation. The nature of crimes has tended to change from individual hurt or humiliation to organised mass violence. My Government proposes to constitute a high-level authority called Commissioner for Scheduled Castes and Scheduled tribes which shall have the power to investigate and monitor all matters relating to constitution, legal and economic safeguards provided and to evaluate their efficiency. In addition, this Authority will also enquire into specific complaints and grievances with respect to deprivation of rights and safeguards and issue orders for redressing them. My Government also proposes to introduce Karnataka Scheduled Caste and Scheduled Tribes (Redressal of Grievances) Bill for this purpose.

19. In order to ensure that the SCs & STs get a fair representation in the State Services, my Government has decided to implement the system of determining the backlog vacancies in the promotional quota, w.e.f. 27-4-1978, i.e., the date from which the roster system was introduced.

20. My Government is anxious that the SC & ST Meritorious candidates should be provided employment as soon as they leave the portals of the University. Therefore, my Government has proposed to simplify the relevant rules.

21. My Government proposes to appoint a permanent Commission for Backward Classes to go into the difficulties and conditions of socially and educationally backward classes and evaluate the implementation of the various schemes which are specifically meant for them. At this stage I would like to inform the Hon'ble Members that the recommendations of the III Backward Classes Commission headed by Justice O.Chinnappa Reddy are under the active consideration of my Government. My Government also intends to constitute a permanent Karnataka State Commission for Women to look-after matters relating to atrocities on women, child marriages and dowry.

22. My Government is committed to implement the 15-Point Programme initiated by our beloved former Prime Minister late Smt. Indira Gandhi for the welfare of the minorities in the State.

23. My Government has launched the Total Literacy compaign in the State. In the District of Dakshina Kannada total literacy was achieved. The Districts of Tumkur, Bidar, Shimoga and Bijapur are also being covered under the programme. Eradication of illiteracy has been conceived as an important goal for the VIII Plan.

24. Rice, Wheat, Sugar and Kerosene oil are being distributed through Public Distribution System. My Government has taken action to deliver PDS commodities to the door-steps of remote places. My Government has decided to conduct re-survey to identify eligible families with income not more than Rs.6,400 per annum and replace the green cards with new cards.

25. My Government proposes to bring a radical Pachayat Raj Bill Keeping in view the Constitutional amendment pending before Parliament and the experience gained during the past five years in the working of Panchayat Raj in the state. It is proposed to bring about political and administrative decentralisation in the proposed new Bill and to conduct elections after delimitation of constituencies on the basis of the latest population census conducted in 1991, at the earliest.

26. With a view to promoting quick and early settlement of legal disputes, my Government has conducted 674 Lok Adalats. As the Scheme is well recieved by the public, my Government proposes to hold more number of Lok Adalats in the coming years, covering many areas of litigation.

27. You are aware of the responsibilities which you have assumed as representatives of the people and I have not doubt that you will carry out the said responsibilities in the highest traditions of the Karnataka Legislature. You have an important role to play in communicating to the people Government's Philosophy of development. You also have to carry to the people the latest information about the many schemes which have been formulated so that welfare measures and fruits of development reach them. I conclude my address wishing all the Hon'ble Members success in their deliberations.

JAI HIND, JAI KARNATAKA.

(ಸದನವು 4 ಗಂಟೆ 18 ನಿಮಿಷಕ್ಕೆ ಮುಕ್ತಾಯಗೊಂಡಿತು)

(ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಕನ್ನಡ ಅನುವಾದ)

ಸನ್ಮಾನ್ಯ ಸಭಾಪತಿಯವರೇ, ಸಭಾಧ್ಯಕ್ಷರೇ ಮತ್ತು ಸದಸ್ಯರೇ,

ರಾಜ್ಯ ವಿಧಾನಮಂಡಲದ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮತ್ತೊಮ್ಮೆ ಭಾಷಣ ಮಾಡಲು ನನಗೆ ಅತೀವ ಸಂತೋಷವಾಗುತ್ತದೆ. ಈ ಚಿಲುವಿನ ಮತ್ತು ಪ್ರಗತಿಪರ ನಾಡಿನ ರಾಜ್ಯಪಾಲನಾಗಿ ಕಳೆದ ಒಂದು ವರ್ಷದ ನನ್ನ ಸೇವಾವಧಿಯಲ್ಲಿ ಬಹಳಷ್ಟು ತಿಳಿದುಕೊಂಡಿದ್ದೇನೆ ಹಾಗೂ ಅದು ಸಾಕಷ್ಟು ಉಪಯುಕ್ತವೂ ಆಗಿದೆ.

2. ಸಮಾಜದ ಬಡ ವರ್ಗದವರ ಉನ್ನತಿಗಾಗಿ ಮತ್ತು ರಾಜ್ಯದ ಜನರಿಗೆ, ಅದರಲ್ಲೂ ಮುಖ್ಯವಾಗಿ, ಗ್ರಾಮಗಳಲ್ಲಿ ವಾಸಿಸುತ್ತಿರುವವರಿಗೆ ನೆಮ್ಮದಿಯ ಜೀವನ ಮಟ್ಟ ದೊರೆಯುವಂತೆ ಮಾಡಲು ನನ್ನ ಹಿಂದಿನ ಭಾಷಣದಲ್ಲಿ ನಾನು ಘೋಷಿಸಿದ್ದ ಕಾರ್ಯನೀತಿಗಳನ್ನು ಮತ್ತು ಕಾರ್ಯಕ್ರಮಗಳನ್ನು ನನ್ನ ಸರ್ಕಾರ ಬಹಳ ನಿಷ್ಠಾಪೂರ್ವಕವಾಗಿ, ಪ್ರಾಮಾಣಿಕವಾಗಿ ಅನುಷ್ಠಾನಗೊಳಿಸಿದೆ ಎಂದು ಹೇಳಲು ನನಗೆ ಹೆಮ್ಮೆ ಎನಿಸುತ್ತಿದೆ. ರಾಜ್ಯದ ಜನತೆಯ ಶ್ರೇಯೋಭಿವೃದ್ಧಿ ಮತ್ತು ಅವರ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಅಭಿವೃದ್ಧಿಯು ಮುಖ್ಯವಾಗಿ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಯನ್ನು ಮತ್ತು ಗ್ರಾಮೀಣ ಜನರ ಸಾಮಾಜಿಕ ಮತ್ತು ಸಾಂಸ್ಕೃತಿಕ ಜಾಗೃತಿಯನ್ನು ಅವಲಂಬಿಸಿದೆ ಎಂದು ನನ್ನ ಸರ್ಕಾರವು ನಂಬಿದೆ. ಈ ಪರಿಜ್ಞಾನದೊಂದಿಗೆ, ನನ್ನ ಸರ್ಕಾರದ ಕಾರ್ಯನೀತಿಗಳು ಮತ್ತು ಕಾರ್ಯಕ್ರಮಗಳು ಮೂಲತಃ ರಾಜ್ಯದ ಜನಸಮುದಾಯದಲ್ಲಿ ಬಹುಸಂಖ್ಯಾತರಾಗಿರುವ ಅಂಥ ಜನರಿಗಾಗಿಯೇ ಹಮ್ಮಿಕೊಂಡಂಥವಾಗಿವೆ.

3. ಹತ್ತನೆಯ ಲೋಕಸಭೆಗೆ ನಡೆದ ಸಾರ್ವತ್ರಿಕ ಚುನಾವಣೆಗಳು ಬಹುಮಟ್ಟಿಗೆ ಶಾಂತಿಯುತವಾಗಿಯೇ ನಡೆದವು ಮತ್ತು ಈಗ ಶ್ರೀ ಪಿ.ವಿ. ನರಸಿಂಹರಾವ್ ಅವರ ಸಮರ್ಥ ಮತ್ತು ಅನುಭವೀ ನಾಯಕತ್ವದ ಸುಭದ್ರ ಸರ್ಕಾರ ಅಧಿಕಾರಕ್ಕೆ ಬಂದಿದೆ. ದೇಶವು ಸಂಸದೀಯ ಪ್ರಜಾಪ್ರಭುತ್ವದಲ್ಲಿ ಮತ್ತೊಮ್ಮೆ ತನ್ನ ಪ್ರೌಢತೆಯನ್ನು ತೋರ್ಪಡಿಸಿದೆ. ಆದಾಗ್ಯೂ ಸಾರ್ವತ್ರಿಕ ಚುನಾವಣೆಯ ಮಧ್ಯದಲ್ಲಿ, ನಮ್ಮ ಮೆಚ್ಚಿನ ಕ್ರಿಯಾಶೀಲ ನಾಯಕರಾಗಿದ್ದ ಶ್ರೀ ರಾಜೀವ್ ಗಾಂಧಿಯವರ ಆಕಾಲಿಕ ಮತ್ತು ದುರಂತಮಯ ಸಾವಿನಿಂದ ನಾವು ತಲ್ಲಣಗೊಂಡವು.

4. ಕಳೆದ ವರ್ಷ, ರಾಜ್ಯದಲ್ಲಿ ಭಾರೀ ಮಳೆಯಾದುದರಿಂದ ಕೆಲವು ಭಾಗಗಳಲ್ಲಿ ಪ್ರವಾಹದಿಂದ ಆಸ್ತಿಪಾಸ್ತಿಗೆ ಹಾನಿಯಾಗಿದ್ದರೆ, ಇತರ ಕೆಲವು ಭಾಗಗಳಲ್ಲಿ ಕ್ಷಾಮ

ಪರಿಸ್ಥಿತಿ ಉಂಟಾಗಿತ್ತು. ಪ್ರವಾಹದಿಂದ ತೊಂದರೆಗೊಳಗಾದವರಿಗೆ ಪರಿಹಾರ ಒದಗಿಸಲು ಮತ್ತು ಸಮಾಜದ ಆರ್ಥಿಕವಾಗಿ ದುರ್ಬಲರಾದ ವರ್ಗಗಳವರ ಹಾನಿಗೀಡಾದ ಮನೆಗಳನ್ನು ಪುನಃ ನಿರ್ಮಿಸಲು ನನ್ನ ಸರ್ಕಾರ ಕ್ರಮ ಕೈಗೊಂಡಿದೆ ಮತ್ತು ಕ್ಷಾಮಪೀಡಿತ ಪ್ರದೇಶಗಳಲ್ಲಿ ಸಾಕಷ್ಟು ಪರಿಹಾರ ಕಾರ್ಯಗಳನ್ನು ಕೈಗೊಂಡಿದೆ.

5. ಕಾವೇರಿ ಜಲವಿವಾದ ನ್ಯಾಯಮಂಡಳಿಯ ಮಧ್ಯಕಾಲೀನ ಆಜ್ಞೆ ಮತ್ತು ಗೆಜೆಟ್ಟಿನಲ್ಲಿ ಅದರ ಪ್ರಕಟಣೆಯು ರಾಜ್ಯದ ಶಾಂತಿ ಮತ್ತು ಸುವ್ಯವಸ್ಥೆಯನ್ನು ಹದೆಗೆಡಿಸಿತ್ತು. ಕಾವೇರಿ ಜಲಾನಯನ ಪ್ರದೇಶದ ರೈತರ ಹಿತಾಸಕ್ತಿಗಳನ್ನು ಕಾಪಾಡುವುದಕ್ಕೆ ಸಂಬಂಧಿಸಿದಂತೆ ರಾಜ್ಯದ ಜನತೆಯು ತನ್ನ ಒಗ್ಗಟ್ಟನ್ನು ತೋರಿಸಿದಾಗ ಕರ್ನಾಟಕದ ಕೆಲವು ಸ್ಥಳಗಳಲ್ಲಿ ಕೆಲವು ದುರದೃಷ್ಟಕರ ಘಟನೆಗಳು ನಡೆದವು. ಅಂತಹ ಹಿಂಸಾಕೃತ್ಯಗಳಿಂದ. ಯಾವುದೇ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಿಲ್ಲ ಮತ್ತು ಬಗೆಹರಿಯಲಾರದು ಎಂಬ ವಿಚಾರದಲ್ಲಿ ನನ್ನ ಸರ್ಕಾರಕ್ಕೆ ನಂಬಿಕೆ ಇದೆ ಮತ್ತು ಅಂತಹ ಘಟನೆಗಳು ಮರುಕಳಿಸದಂತೆ ನೋಡಿಕೊಳ್ಳಲು ಸರ್ಕಾರವು ಸಜ್ಜಾಗುತ್ತಿದೆ. ಈ ನದೀ ನೀರಿನ ವಿವಾದಗಳನ್ನು ಪರಸ್ಪರ ಚರ್ಚೆಗಳ ಮತ್ತು ಸಂಧಾನದ ಮೂಲಕ ಬಗೆಹರಿಸುವುದು ಸೂಕ್ತ ಎಂದು ನನ್ನ ಸರ್ಕಾರ ಹಿಂದಿನಿಂದಲೂ ಪ್ರತಿಪಾದಿಸುತ್ತಾ ಬಂದಿದೆ. ಈ ಬಗ್ಗೆ ಮಾತುಕತೆಗಳು ನಡೆಯುವಂತೆ ಕ್ರಮ ಆರಂಭಿಸಿರುವುದಕ್ಕಾಗಿ ಮಾನ್ಯ ಪ್ರಧಾನಿಯವರಿಗೆ ಮತ್ತು ಪರಸ್ಪರ ಅರಿವಿನ ವಾತಾವರಣದಲ್ಲಿ ನಡೆದ ಚರ್ಚೆಯಲ್ಲಿ ಪಾಲುಗೊಂಡಿರುವುದಕ್ಕಾಗಿ ಸಂಬಂಧಿಸದ ರಾಜ್ಯಗಳ ಮುಖ್ಯಮಂತ್ರಿಗಳಿಗೆ ನನ್ನ ಸರ್ಕಾರ ಆಭಾರಿಯಾಗಿದೆ. ಎಲ್ಲ ರಾಜ್ಯಗಳ ರೈತರ ಹಿತದೃಷ್ಟಿಯಿಂದ ಮತ್ತು ಎಲ್ಲಾ ರಾಜ್ಯಗಳು ಒಂದು ರಾಜೀ ಸೂತ್ರವನ್ನು ಅಂಗೀಕರಿಸುವ ಮೂಲಕ ಕಾವೇರಿ ನೀರನ್ನು ಒಂದು ರಾಷ್ಟ್ರೀಯ ಸ್ವತ್ತಾಗಿ ಬಳಸುವ ದಿಶೆಯಲ್ಲಿ ಎಲ್ಲಾ ರಾಜ್ಯಗಳಿಗೂ ತೃಪ್ತಿಯಾಗುವ ಒಂದು ಅಂತಿಮ ಪರಿಹಾರ ದೀರ್ಘಾವಧಿಯ ಒಪ್ಪಂದವೊಂದಕ್ಕೆ ಶೀಘ್ರವೇ ಬರಲಾಗುವುದೆಂದು ಕೂಡ ನನ್ನ ಸರ್ಕಾರ ಆಶಿಸಿದೆ. ಪರಸ್ಪರ ಒಪ್ಪಗೆಯಾಗುವಂತಹ ಸೌಹಾರ್ದಯುತ ಒಪ್ಪಂದವನ್ನು ಕಂಡುಕೊಳ್ಳುವಲ್ಲಿ ಮಾನ್ಯ ಪ್ರಾಧಾನಿಯವರು ಮಾಡುವ ಪ್ರಯತ್ನಗಳಿಗೆ ಎಲ್ಲ ಸಹಾಯ ಮತ್ತು ಸಹಕಾರವನ್ನು ನೀಡಲಾಗುವುದೆಂಬುದನ್ನು ನನ್ನ ಸರ್ಕಾರ ಪುನರುಚ್ಚರಿಸುತ್ತದೆ ಮತ್ತು ಕಾವೇರಿ ಕಣಿವೆ ಪ್ರದೇಶದ ರೈತರ ಹಿತಾಸಕ್ತಿಗಳನ್ನು ಕಾಪಾಡುವುದಕ್ಕೆ ಸಾಧ್ಯವಾದುದೆಲ್ಲವನ್ನು ಮುಂದೆಯೂ ಮಾಡುವುದಾಗಿ ಕರ್ನಾಟಕ ಜನತೆಗೆ ನನ್ನ ಸರ್ಕಾರ ಭರವಸೆ ನೀಡುತ್ತದೆ. ಕಾವೇರಿ ಜಲವಿವಾದದಲ್ಲಿ ಎಲ್ಲಾ ರಾಜಕೀಯ ಪಕ್ಷಗಳು ಮತ್ತು ಸಮಾಜದ ಎಲ್ಲಾ ವರ್ಗದ ಜನತೆ ತಮ್ಮ ಸಂಪೂರ್ಣ ಸಹಕಾರ ನೀಡಿದ್ದಕ್ಕಾಗಿ ನನ್ನ ಸರ್ಕಾರ ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತದೆ. ಇನ್ನು ಮುಂದೆಯೂ ಜನತೆ ತಮ್ಮ ಬೆಂಬಲ ಮತ್ತು ಸಹಕಾರವನ್ನು ನೀಡುವರೆಂದು ಹಾಗೂ ಒಗ್ಗಟ್ಟಾಗಿ ಕಾರ್ಯಪ್ರವೃತ್ತರಾಗುವರೆಂದು ನನ್ನ ಸರ್ಕಾರ ನಂಬಿದೆ.

6.ಸಮಾಜದ ಬಡಜನರಿಗಾಗಿ ರೂಪಿಸಲಾದ "ಆಶ್ರಯ", "ಅಕ್ಷಯ", "ಆರಾಧನಾ" ಮುಂತಾದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವ ಕಾರ್ಯದಲ್ಲಿ ಮಾನ್ಯ ಸದಸ್ಯರು ನೀಡಿದ ಅಮೂಲ್ಯ ಬೆಂಬಲ ಕುರಿತು ನಾನು ವಿಶೇಷವಾಗಿ ಹೇಳಬಯಸುತ್ತೇನೆ. ರಾಜ್ಯದ ಅಭಿವೃದ್ಧಿಗಾಗಿ ಕೈಗೊಳ್ಳಲಿರುವ ಮುಂದಿನ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಹಾಗೂ ಕಾರ್ಯಗತಗೊಳಿಸುವಲ್ಲಿ ಮಾನ್ಯ ಸದಸ್ಯರು ಸಕ್ರಿಯವಾಗಿ ಪಾಲ್ಗೊಳ್ಳುವರೆಂಬ ಭರವಸೆ ನನಗಿದೆ.

7. ಯೋಜನಾ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುವಲ್ಲಿ ರಾಜ್ಯದ ಕಾರ್ಯನಿರ್ವಹಣೆಯನ್ನು ಯೋಜನಾ ಆಯೋಗವು ಪ್ರಶಂಸಿಸಿದೆ. ಮುಖ್ಯವಾಗಿ ರಾಜ್ಯದ ಹಣಕಾಸಿನ ನಿರ್ವಹಣೆ ಹಾಗೂ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಮತ್ತು ಅವುಗಳನ್ನು ರಾಜ್ಯದ ಸರ್ವತೋಮುಖ ಅಭಿವೃದ್ಧಿಗಾಗಿ ಬಳಸಿಕೊಳ್ಳುವಲ್ಲಿ ಮಾಡಿರುವ ಪ್ರಯತ್ನಗಳನ್ನು ಪ್ರಶಂಸಿಸಿರುವುದು ಗಮನಾರ್ಹ. ಈ ದಿಸೆಯಲ್ಲಿ ಪ್ರಯತ್ನಗಳನ್ನು ಮುಂದುವರಿಸಲು ಹಾಗೂ ಯೋಜನೆಗಳಲ್ಲಿ ಇನ್ನೂ ಬೃಹತ್ ಪ್ರಮಾಣದಲ್ಲಿ ಹಣ ಹೂಡುವ ಪ್ರಯತ್ನಗಳಿಗೆ ನನ್ನ ಸರ್ಕಾರ ಬದ್ಧವಾಗಿದೆ. ಕೃಷಿ, ನೀರಾವರಿ, ವಿದ್ಯುಚ್ಛಕ್ತಿ ಉತ್ಪಾದನೆ, ಕೈಗಾರಿಕೆ, ಆರೋಗ್ಯ ಮತ್ತು ಶಿಕ್ಷಣ ಈ ಕ್ಷೇತ್ರಗಳಿಗೆ ಹಚ್ಚಿನ ಆದ್ಯತೆ ನೀಡಲಾಗುವುದು.

8. 1980-90ರ ದಶಕದಲ್ಲಿ, ರಾಜ್ಯದಲ್ಲಿ ಬಹುತೇಕ ಎಲ್ಲ ಬೆಳೆಗಳೂ ಸೇರಿದಂತೆ ಕೃಷಿವಲಯದಲ್ಲಿ ಉತ್ಪಾದನೆ ಇಳಿಮುಖವಾಗಿತ್ತೆಂಬುದು ನಮ್ಮೆಲ್ಲರಿಗೂ ಆತಂಕದ ವಿಷಯವಾಗಿತ್ತು. ಇಂಥ ಪರಿಸ್ಥಿತಿಯಲ್ಲಿ ತುರ್ತು ಹಾಗೂ ಪರಿಣಾಮಕಾರಿ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಆದ್ದರಿಂದ ಕೃಷಿ ವಲಯದ ಸರ್ವತೋಮುಖ ಅಭಿವೃದ್ಧಿಗೆ ಅತ್ಯಂತ ಹೆಚ್ಚಿನ ಆದ್ಯತೆ ನೀಡಲು ನನ್ನ ಸರ್ಕಾರ ಉದ್ದೇಶಿಸಿದೆ. ನನ್ನ ಸರ್ಕಾರವು ಮುಂಗಾರು ಮತ್ತು ಹಿಂಗಾರು ಬೆಳೆ ಎರಡರಲ್ಲೂ 82 ಲಕ್ಷ ಟನ್‌ಗಳಷ್ಟು ಆಹಾರ ಧಾನ್ಯಗಳನ್ನು ಉತ್ಪಾದಿಸುವ ಗುರಿ ಹೊಂದಿದೆ. ರಾಜ್ಯದ ಕೆಲವು ಭಾಗಗಳಲ್ಲಿ ಭಾರಿ ಮಳೆಯಾಗಿದ್ದರೂ ಮತ್ತು ಇತರ ಕೆಲವು ಭಾಗಗಳಲ್ಲಿ ಕ್ಷಾಮ ಪರಿಸ್ಥಿತಿ ಉಂಟಾಗಿದ್ದರೂ ಸಹ ಈ ಗುರಿ ಸಾಧಿಸುವ ನಂಬಿಕೆ ರಾಜ್ಯಕ್ಕಿದೆ. ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಉತ್ಪಾದಕ ಸಾಮರ್ಥ್ಯವನ್ನು ಸುಧಾರಿಸಲು ರಾಜ್ಯಸರ್ಕಾರದಿಂದ ಹಾಗೂ ಅದರ ಏಜೆನ್ಸಿಗಳಿಂದ ರಾಜ್ಯದ ರೈತರಿಗೆ ನಿರಂತರ ಮಾರ್ಗದರ್ಶನ, ಬೆಂಬಲ ಹಾಗೂ ನೆರವಿನ ಅಗತ್ಯವಿದೆ ಎಂದು ನನ್ನ ಸರ್ಕಾರ ನಂಬಿದೆ. ಆದ್ದರಿಂದ, ಭೂಸಾರ ಪರೀಕ್ಷೆ, ಸಣ್ಣ ನೀರಾವರಿ, ಸುಧಾರಿತ ಬೀಜಗಳ ಪೂರೈಕೆ, ಆಧುನಿಕ ಕೃಷಿ ಸಲಕರಣೆಗಳ ಪೂರೈಕೆ ಮುಂತಾದ ಅತ್ಯಂತ ಮೂಲಭೂತ ಸೌಲಭ್ಯಗಳನ್ನು ಸೃಜಿಸುವುದು ಹಾಗೂ ಹೆಚ್ಚಿಸುವುದು ಮತ್ತು ಹನಿ ನೀರಾವರಿ ಹಾಗೂ ತುಂತುರು ನೀರಾವರಿಗಳಂಥ ಆಧುನಿಕ ನೀರು ಪೂರೈಕೆ ವಿಧಾನಗಳನ್ನು ಅಳವಡಿಸುವುದರ ಜೊತೆಗೆ ರೈತರಿಗೆ ಹೆಚ್ಚು ಪ್ರೋತ್ಸಾಹಗಳನ್ನು ಒದಗಿಸಲು ನನ್ನ ಸರ್ಕಾರ ನಿರ್ಧರಿಸಿದೆ. ಈ ಕ್ಷೇತ್ರಗಳಲ್ಲಿ ವಿವರವಾದ ಯೋಜನೆಗಳನ್ನು ರೂಪಿಸುವ ಕಾರ್ಯದಲ್ಲಿ ನನ್ನ ಸರ್ಕಾರವು ಈಗಾಗಲೇ ತೊಡಗಿದೆ.

9. ಕೃಷಿಯ ಕೆಲವಾರು ವಿಶಿಷ್ಟ ಕ್ಷೇತ್ರಗಳಲ್ಲಿ ಜನರು ದೀರ್ಘಕಾಲದಿಂದಲೂ ರೂಢಿಸಿಕೊಂಡು ಬಂದಿರುವ ನೈಪುಣ್ಯ ಹಾಗೂ ಸೌಲಭ್ಯಗಳನ್ನು, ಅತ್ಯುತ್ತಮವಾಗಿ ಬಳಸಿಕೊಳ್ಳಲು ನನ್ನ ಸರ್ಕಾರ ಉದ್ದೇಶಿಸಿದೆ. ಅದಕ್ಕನುಸಾರವಾಗಿ, ರೇಷ್ಮೆ, ತೋಟಗಾರಿಕೆ ಹಾಗೂ ಅರಣ್ಯ ವಲಯಗಳ ಅಭಿವೃದ್ಧಿಯ ನೆಲಗಟ್ಟನ್ನು ಇನ್ನೂ ಹೆಚ್ಚು ಬಲಪಡಿಸಲು ನನ್ನ ಸರ್ಕಾರ ಉದ್ದೇಶಿಸಿದೆ. ಈ ಉದ್ದೇಶಕ್ಕಾಗಿ ಈ ಕ್ಷೇತ್ರಗಳಲ್ಲಿ ಉನ್ನತ ಶಿಕ್ಷಣ ನೀಡುವ ಸಲುವಾಗಿ ವಿಶೇಷ ಗಮನಹರಿಸಲು ನನ್ನ ಸರ್ಕಾರ ಉದ್ದೇಶಿಸಿದ್ದು ಕೋಲಾರ ಜಿಲ್ಲೆಯಲ್ಲಿ ರೇಷ್ಮೆ ಕಾಲೇಜೊಂದನ್ನು ಹಾಗೂ ಕೊಡಗು ಜಿಲ್ಲೆಯಲ್ಲಿ ಅರಣ್ಯ ಕಾಲೇಜೊಂದನ್ನು ಪ್ರಾರಂಭಿಸಲು ಪ್ರಸ್ತಾವಿಸಿದೆ. ಮುಂಬರುವ ವರ್ಷಗಳಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಪೂರಕ ಸಾಧನಗಳಾಗುವಂತೆ ಈ ಕಾಲೇಜುಗಳಲ್ಲಿ ರಾಜ್ಯದ ವಿದ್ಯಾರ್ಥಿಗಳಿಗೆ ವಿಶೇಷ ಶಿಕ್ಷಣ ನೀಡಲಾಗುವುದು

10. ರಾಜ್ಯವು ಕ್ರಿ.ಶ. 2000ದ ಇಸವಿಯೊಳಗೆ ಕೃಷ್ಣಾ ನದೀ ನೀರಿನಲ್ಲಿ ತನ್ನ ಪಾಲನ್ನು ಬಳಸಿಕೊಳ್ಳಬೇಕಾಗಿದೆ ಎನ್ನುವ ಅಂಶ ಮಾನ್ಯ ಸದಸ್ಯರಿಗೆ ತಿಳಿದಿದೆ. ಆದ ಕಾರಣ ಕೃಷ್ಣಾ ಕಣಿವೆ ಪ್ರದೇಶದಲ್ಲಿ ವಿಶ್ವ ಬ್ಯಾಂಕಿನ ನೆರವಿನಿಂದ ಅನೇಕ ಯೋಜನೆಗಳನ್ನು ಕೈಗೊಳ್ಳಲಾಗಿದ್ದು. ಈ ಯೋಜನೆಗಳ ಅನುಷ್ಠಾನ ಕಾರ್ಯ ವಿವಿಧ ಹಂತಗಳಲ್ಲಿದೆ. ಆದರೂ, ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಕಾರ್ಯಗತಗೊಳಿಸಲು ಹಾಗೂ ನೀರನ್ನು ಅತ್ಯುತ್ತಮವಾಗಿ ಬಳಸಿಕೊಳ್ಳಲು, ಈ ಯೋಜನಾ ಕಾರ್ಯಗಳಲ್ಲಿ ತೊಡಗಿರುವ ಹಲವಾರು ಏಜೆನ್ಸಿಗಳ ನಡುವೆ ಉತ್ತಮ ಸಮನ್ವಯದ ಅವಶ್ಯಕತೆಯಿದೆ ಎಂಬ ಅಂಶವನ್ನು ನನ್ನ ಸರ್ಕಾರವು ಮನಗಂಡಿದೆ. ಇವೆಲ್ಲವುಗಳನ್ನು ಸಾಧಿಸುವ ಸಲುವಾಗಿ, ನನ್ನ ಸರ್ಕಾರವು ಒಂದು ಸ್ವಾಯತ್ತ ಕೃಷ್ಣಾ ಕಣಿವೆ ಅಭಿವೃದ್ಧಿ ಪ್ರಾಧಿಕಾರವನ್ನು ಸ್ಥಾಪಿಸಲು ನಿರ್ಧರಿಸಿದೆ. ಈ ಪ್ರಾಧಿಕಾರಕ್ಕೆ ಕೃಷ್ಣಾ ಕಣಿವೆ ಪ್ರದೇಶದಲ್ಲಿನ ಎಲ್ಲಾ ಭಾರೀ, ಮಧ್ಯಮ ಹಾಗೂ ಸಣ್ಣ ನೀರಾವರಿ ಯೋಜನೆಗಳ ರಚನೆ, ಅನುಷ್ಠಾನ ಕಾರ್ಯಾಚರಣೆ ಮತ್ತು ನಿರ್ವಹಣೆ ಹಾಗೂ ನೀರು ಪೂರೈಕೆ ಪ್ರದೇಶದ ಸಮಗ್ರ ಅಭಿವೃದ್ಧಿಯ ಜವಾಬ್ದಾರಿಯನ್ನು ವಹಿಸಲಾಗುತ್ತದೆ. ಕ್ರಿ.ಶ. 2000 ದೊಳಗಾಗಿ ತನ್ನ ಪಾಲನ್ನು ಬಳಸಿಕೊಳ್ಳುವುದಕ್ಕೆ ನನ್ನ ಸರ್ಕಾರವು ಸರ್ವ ಪ್ರಯತ್ನ ಮಾಡುತ್ತದೆ.

11. ಕೃಷಿ ಹಾಗೂ ಕೈಗಾರಿಕಾ ಕ್ಷೇತ್ರಗಳಲ್ಲಿ ರಾಜ್ಯದ ಪ್ರಗತಿಗೆ ಸಂಬಂಧಿಸಿದಂತೆ ವಿದ್ಯುಚ್ಛಕ್ತಿ ಉತ್ಪಾದನಾ ಅಭಿವೃದ್ಧಿಯ ಮಹತ್ತರ ಪಾತ್ರವನ್ನು ಅರಿತು ನನ್ನ ಸರ್ಕಾರವು ವಿದ್ಯುಚ್ಛಕ್ತಿ ಉತ್ಪಾದನೆಯಲ್ಲಿ ಖಾಸಗಿ ವಲಯಗಳು ಪಾಲ್ಗೊಳ್ಳುವುದಕ್ಕೆ ಅನುಮತಿ ನೀಡುವ ತನ್ನ ಕಾರ್ಯನೀತಿಯನ್ನು ಪ್ರಕಟಿಸಿದೆ. ಈ ಕಾರ್ಯನೀತಿಗನುಸಾರವಾಗಿ ಕೆಲವು ಸಣ್ಣ ಜಲ-ವಿದ್ಯುತ್ ಯೋಜನೆಗಳ ಅನುಷ್ಠಾನ ಕಾರ್ಯವನ್ನು ಖಾಸಗೀ ವಲಯಗಳಿಗೆ ಈಗಾಗಲೇ ವಹಿಸಿಕೊಡಲಾಗಿದೆ ಎಂದು ತಿಳಿಸಲು ನನಗೆ ಸಂತೋಷವಾಗುತ್ತಿದೆ. ಅನೇಕ ಭಾರೀ ಪ್ರಮಾಣದ ಜಲ-ವಿದ್ಯುತ್ ಯೋಜನೆಗಳನ್ನು ಈಗಾಗಲೇ ಗುರುತಿಸಲಾಗಿದ್ದು ನನ್ನ ಸರ್ಕಾರವು ಆದಷ್ಟು ಶೀಘ್ರದಲ್ಲಿಯೇ ಅವುಗಳ ಅನುಷ್ಠಾನ ಕಾರ್ಯವನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಿದೆ. ರಾಜ್ಯ ಸ್ವಾಮ್ಯದ ಕರ್ನಾಟಕ ವಿದ್ಯುತ್ ನಿಗಮಕ್ಕೆ ಈ ಹಲವಾರು ಯೋಜನೆಗಳ ಅನುಷ್ಠಾನ ಕಾರ್ಯವನ್ನು ವಹಿಸಲಾಗಿದೆ. ಆದರೂ, ಭಾರೀ ಪ್ರಮಾಣದ ಜಲ-ವಿದ್ಯುತ್ ಯೋಜನೆಗಳಲ್ಲಿಯೂ ಖಾಸಗಿ ವಲಯದವರು ಪಾಲ್ಗೊಳ್ಳುವುದು ಅವಶ್ಯಕವೆಂದು ನನ್ನ ಸರ್ಕಾರವು ಭಾವಿಸುತ್ತದೆ. ಅದರಂತೆ, ಅತ್ಯುತ್ತಮ ತಾಂತ್ರಿಕ ಜ್ಞಾನದೊಂದಿಗೆ ಮತ್ತು ಆಧುನಿಕ ರೀತಿಯಲ್ಲಿ ಅವುಗಳನ್ನು ಶೀಘ್ರವಾಗಿ ಪೂರ್ಣಗೊಳಿಸುವ ಮತ್ತು ಕ್ರಿ.ಶ. 2000ದೊಳಗಾಗಿ ವಿದ್ಯುತ್ ಉತ್ಪಾದನೆಯಲ್ಲಿ ಸ್ವಯಂಪೂರ್ಣತೆಯನ್ನು ಸಾಧಿಸುವ ಉದ್ದೇಶದಿಂದ ಸಹ ಈ ಯೋಜನೆಗಳನ್ನು ಸಾರ್ವಜನಿಕ, ಖಾಸಗಿ ಮತ್ತು ಜಂಟಿ ವಲಯದಲ್ಲಿ ಕೈಗೆತ್ತಿಕೊಳ್ಳಲು ನನ್ನ ಸರ್ಕಾರ ನಿರ್ಧರಿಸಿದೆ. ಈ ಉದ್ದೇಶಕ್ಕಾಗಿ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಖಾಸಗಿ ವಲಯದಲ್ಲಿ ವಿದ್ಯುತ್ ಉತ್ಪಾದನಾ ಉದ್ಯಮಿಗಳೊಂದಿಗೆ 'ಬ್ಯಾಕಿಂಗ್' ವ್ಯವಸ್ಥೆಯೊಂದನ್ನು ಹೊಂದಿರುತ್ತದೆ. ಆ ವ್ಯವಸ್ಥೆ ಪ್ರಕಾರ, ಅವರು ತಮ್ಮ ಆಯ್ಕೆಯ ಸ್ಥಳಗಳಲ್ಲಿ ವಿದ್ಯುಚ್ಛಕ್ತಿಯನ್ನು ತಾವೇ ಬಳಸಿಕೊಳ್ಳಬಹುದಾಗಿದೆ.

12. ನನ್ನ ಸರ್ಕಾರ ಗಮನ ಹರಿಸಬೇಕಾದ ಇನ್ನೊಂದು ವಿಷಯವೆಂದರೆ ಜನತೆಗೆ ಸಾಕಷ್ಟು ರಸ್ತೆ ಸಾರಿಗೆ ಸೌಲಭ್ಯವನ್ನು ಒದಗಿಸುವುದು. ರಾಜ್ಯದಲ್ಲಿ ಇದುವರೆಗೂ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ರಸ್ತೆ ಸಾರಿಗೆ ಸೌಲಭ್ಯ ಒದಗಿಸುವ ಮುಖ್ಯ ಆಧಾರ ಸಂಸ್ಥೆಯಾಗಿದೆ. ರಸ್ತೆ ಸಾರಿಗೆ ನಿಗಮವು ಸುಮಾರು 9,000

ವಾಹನಗಳು, 226 ವಾಹನ ನಿಲ್ದಾಣಗಳು ಮತ್ತು ಗ್ರಾಮೀಣ ಪ್ರದೇಶಗಳಲ್ಲಿರುವ ನೂರಾರು ರಸ್ತೆ ಬದಿ ತಂಗುದಾಣಗಳ ಮೂಲಕ ಸೇವೆಯನ್ನು ಸಲ್ಲಿಸುತ್ತಿದೆ. ಇದು ಇನ್ನಷ್ಟು ಸೇವೆಗಳನ್ನು ಒದಗಿಸಲು ಹಾಗೂ ಮುಂದಿನ ವರ್ಷದಲ್ಲಿ ಬಸ್ ನಿಲ್ದಾಣ ಮತ್ತು ತಂಗುದಾಣಗಳಂತಹ ಹೆಚ್ಚು ಹೆಚ್ಚು ಸೌಲಭ್ಯಗಳನ್ನು ಪ್ರಯಾಣಿಕರಿಗೆ ಒದಗಿಸುವುದಕ್ಕಾಗಿ ಅತ್ಯಂತ ಮಹದಾಕಾಂಕ್ಷೆಯ ಅನೇಕ ಯೋಜನೆಗಳನ್ನು ಹೊಂದಿದೆ. ಪ್ರಯಾಣಿಕರಿಗೆ ಉತ್ತಮ ಸೇವೆಯನ್ನು ಒದಗಿಸುವ ದೃಷ್ಟಿಯಿಂದ ಇನ್ನೂ ಹೆಚ್ಚಿನ ಹಾಗೂ ಉತ್ತಮ ರಸ್ತೆ ಸಾರಿಗೆ ಸೌಲಭ್ಯದ ಅವಶ್ಯಕತೆಯಿದೆಯೆಂದು ನನ್ನ ಸರ್ಕಾರ ಭಾವಿಸುತ್ತದೆ. ರಸ್ತೆ ಸಾರಿಗೆ ಕಾರ್ಯಾಚರಣೆಗಳಲ್ಲಿ ಸ್ಪರ್ಧಾತ್ಮಕ ಮನೋಭಾವವನ್ನು ಮೂಡಿಸಲು ಸಹ ನನ್ನ ಸರ್ಕಾರವು ಉದ್ದೇಶಿಸಿದೆ. ಈಗಾಗಲೇ ನಡೆಸಲಾದ ಸಾರಿಗೆ ಸಮೀಕ್ಷೆಗಳ ಆಧಾರದ ಮೇಲೆ, ನಗರ ಹಾಗೂ ಗ್ರಾಮಾಂತರ ಪ್ರದೇಶಗಳಿರಡರಲ್ಲೂ ಇರುವ ಬಹಳಷ್ಟು ಮಾರ್ಗಗಳಲ್ಲಿ ಹಾಗೂ ಪ್ರದೇಶಗಳಲ್ಲಿ ಖಾಸಗಿ ವಲಯಗಳ ಕಾರ್ಯಾಚರಣೆಗೂ ಅನುಮತಿ ನೀಡಲಾಗುವುದು.

13. 1991ರ ಅಕ್ಟೋಬರ್ 2ರಂದು ಮಾನ್ಯ ಪ್ರಧಾನಿಯವರು ಉದ್ಘಾಟಿಸಿದ 'ವಿಶ್ವ' ಕಾರ್ಯಕ್ರಮ ಅದ್ಭುತ ಪ್ರಗತಿಯನ್ನು ಸಾಧಿಸಿದೆ. ಗ್ರಾಮೀಣ ಜನತೆಗೆ ನಿರಂತರ ಉತ್ಪಾದಕ ಉದ್ಯೋಗವನ್ನು ಕಲ್ಪಿಸುವುದು ಈ ಯೋಜನೆಯ ಉದ್ದೇಶ. ಈ ಯೋಜನೆಯ ಯಶಸ್ಸು ಸರ್ಕಾರದ ನಿರಂತರ ಹಾಗೂ ದೃಢ ಬೆಂಬಲವನ್ನು ಮತ್ತು ಉನ್ನತ ಮಟ್ಟದಲ್ಲಿ ಸರ್ಕಾರ ನಡೆಸುವ ಮೇಲ್ವಿಚಾರಣೆಯನ್ನು ಅವಲಂಬಿಸಿದೆ ಎಂಬುದು ನನ್ನ ಸರ್ಕಾರಕ್ಕೆ ತಿಳಿದಿದೆ.

14. ಆಯ್ದ ಕೆಲವು ಸಾರ್ವಜನಿಕ ವಲಯದ ಕೈಗಾರಿಕೆಗಳನ್ನು ಮತ್ತು ಉದ್ಯಮಗಳನ್ನು ಖಾಸಗೀಕರಣಗೊಳಿಸುವ ಕಾರ್ಯನೀತಿಯೊಂದನ್ನು ಹೊಂದಲು ನನ್ನ ಸರ್ಕಾರವು ಆಶಿಸಿದೆ. ನಿರಂತರವಾಗಿ ನಷ್ಟದಲ್ಲೇ ನಡೆಯುತ್ತಿರುವ ಹಾಗೂ ಕಲ್ಯಾಣ ರಾಷ್ಟ್ರದ ಧ್ಯೇಯೋದ್ದೇಶಗಳಿಗೆ ಹೊರತಾದ ಚಟುವಟಿಕೆಗಳಲ್ಲಿ ತೊಡಗಿರುವ ಘಟಕಗಳಲ್ಲಿರುವ ಹಾಗೂ ಎಲ್ಲಿ ಖಾಸಗಿ ವಲಯವು ಗಟ್ಟಿಯಾಗಿ ಬೆಳೆದಿದೆಯೋ ಅಲ್ಲಿಂದ ತನ್ನ ಷೇರುಗಳನ್ನು ಹಿಂತೆಗೆದುಕೊಳ್ಳುವುದೇ ಸರ್ಕಾರದ ಉದ್ದೇಶ. ತನ್ನ ವಿರಳ ಸಂಪನ್ಮೂಲಗಳಿಂದಲೇ ಅಂಥ ಕೈಗಾರಿಕೆಗಳನ್ನು ಮತ್ತು ಉದ್ಯಮಗಳನ್ನು ಪೋಷಿಸುವ ಭಾರವನ್ನು ಇದು ತಪ್ಪಿಸುತ್ತದೆ ಮತ್ತು ಹಾಗೆ ಹಿಂತೆಗೆದುಕೊಂಡ ಹಣವನ್ನು, ಬಡಜನತೆಗಾಗಿ ಹಾಕಿಕೊಂಡಿರುವ ಕಲ್ಯಾಣ ಕಾರ್ಯಕ್ರಮದಲ್ಲಿ ಸರ್ಕಾರವು ತೊಡಗಿಸುವುದಕ್ಕೆ ಇದರಿಂದ ಸಾಧ್ಯವಾಗುತ್ತದೆ.

15. ರಾಜ್ಯದಲ್ಲಿನ ಜನಸಂಖ್ಯೆ ಬೆಳವಣಿಗೆಯನ್ನು ಪರಿಣಾಮಕಾರಿಯಾಗಿ ತಡೆಗಟ್ಟಿದ ಹೊರತು ರಾಜ್ಯವು ಜೀವನಮಟ್ಟದ ಸುಧಾರಣೆಗಾಗಿ ಹಮ್ಮಿಕೊಂಡಿರುವ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಕಾರ್ಯಚಟುವಟಿಕೆಗಳು ಫಲ ನೀಡಲಾರದೆಂಬುದು ನನ್ನ ಸರ್ಕಾರದ ದೃಢ ನಂಬಿಕೆಯಾಗಿದೆ. ರಾಷ್ಟ್ರೀಯ ಅಭಿವೃದ್ಧಿ ಪರಿಷತ್ತು ತನ್ನ ಹಿಂದಿನ ಸಭೆಯಲ್ಲಿ ಜನಸಂಖ್ಯಾ ನಿಯಂತ್ರಣ ಕ್ರಮಗಳ ಬಗ್ಗೆ ರಾಷ್ಟ್ರೀಯ ಒಟ್ಟಭಿಪ್ರಾಯದ ಅಗತ್ಯವಿದೆ ಹಾಗೂ ಎಲ್ಲ ರಾಜಕೀಯ ಪಕ್ಷಗಳು ಈ ನಿಟ್ಟಿನಲ್ಲಿ ಪ್ರಯತ್ನಗಳನ್ನು ಕೈಗೊಳ್ಳಬೇಕೆಂಬುದಾಗಿ ನನ್ನ ಸರ್ಕಾರವು ನೀಡಿದ ಸಲಹೆಯನ್ನು ಒಪ್ಪಿಕೊಂಡಿದೆ.

16. ಕಾರ್ಯವಿಧಾನಗಳನ್ನು ಸರಳಗೊಳಿಸುವುದು, ಅಧಿಕಾರವನ್ನು ವಹಿಸಿಕೊಡುವುದು, ಸಾರ್ವಜನಿಕರಿಗೆ ಜವಾಬ್ದಾರರಾಗಿರುವುದು, ಗ್ರಾಮದಿಂದ ರಾಜ್ಯಮಟ್ಟದವರೆಗೆ ಮೇಲ್ವಿಚಾರಣೆ ನಡೆಸುವುದು ಮತ್ತು ಸಾರ್ವಜನಿಕ ಕುಂದುಕೊರತೆಗಳನ್ನು ಪರಿಹರಿಸುವುದು. ಇವುಗಳನ್ನು

ಒಳಗೊಂಡ – "ಪಂಚಸೂತ್ರ" ವನ್ನು ನನ್ನ ಸರ್ಕಾರವು ಆರಂಭಿಸಿದೆ. ಕರ್ನಾಟಕ ಆಡಳಿತ ಪ್ರಕ್ರಿಯಾ ವಿಧೇಯಕವನ್ನು ವಿಧಾನಮಂಡಲದ ಉಭಯಸದನಗಳ ಮುಂದೆ ಮಂಡಿಸಿದ್ದು ಅದು ಈಗ ಜಂಟೀ ಸಲಹಾ ಸಮಿತಿಯ ಪರಿಶೀಲನೆಯಲ್ಲಿದೆ. ನನ್ನ ಸರ್ಕಾರವು ವಿವಿಧ ಆಡಳಿತಾತ್ಮಕ ಪ್ರಾಧಿಕಾರಗಳ ರಚನೆ ಮತ್ತು ಕಾರ್ಯಗಳ ಬಗ್ಗೆ ಪುನಃ ಸ್ಪಷ್ಟವಾಗಿ ಅರ್ಥ ವಿವರಣೆ ನೀಡುವ ಮೂಲಕ ಆಡಳಿತವು ಹೆಚ್ಚು ಸ್ಪಂದಿಸುವಂತೆ ಮಾಡುವ ಉದ್ದೇಶ ಹೊಂದಿದೆ. ಜನತೆಗೆ ಇನ್ನೂ ತ್ವರಿತ ಸೇವೆಯನ್ನು ಒದಗಿಸುವ- ಸಲುವಾಗಿ ಜಿಲ್ಲಾ ಅಪೀಲು ನ್ಯಾಯ ಮಂಡಳಿಗಳನ್ನು ಸ್ಥಾಪಿಸುವ ಮೂಲಕ ಜಿಲ್ಲಾ ಮಟ್ಟದಲ್ಲಿಯೇ ಅರೆ ನ್ಯಾಯಿಕ ಸ್ವರೂಪದ ಆದೇಶಗಳ ವಿರುದ್ಧ ನ್ಯಾಯಿಕ ಪುನರ್ ಪರಿಶೀಲನಾ ಸೇವೆಯನ್ನು ಒದಗಿಸುವ ಉದ್ದೇಶ ನನ್ನ ಸರ್ಕಾರಕ್ಕಿದೆ. ಈ ಜಿಲ್ಲಾ ಅಪೀಲು ನ್ಯಾಯ ಮಂಡಳಿಗಳು, ಸಂಬಂಧಪಟ್ಟ ಜಿಲ್ಲೆಯಲ್ಲಿನ ವಿವಿಧ ಇಲಾಖೆಗಳ ಅಧಿಕಾರಿಗಳು ಜಾರಿಗೊಳಿಸಿದ ಶಾಸನಾತ್ಮಕ ಆದೇಶಗಳ ವಿರುದ್ಧದ ಅಪೀಲುಗಳು ಮತ್ತು ಮರುಪರಿಶೀಲನಾ ಅರ್ಜಿಗಳನ್ನು ವಿಚಾರಣೆ ಮಾಡುತ್ತವೆ.

17. ಗ್ರಾಮೀಣ ಪ್ರದೇಶಗಳಲ್ಲಿ ಸ್ಮಶಾನಕ್ಕೆ ಸಂಬಂಧಿಸಿದಂತೆ ಜನರ ಅಗತ್ಯತೆಯ ಬಗ್ಗೆ ನನ್ನ ಸರ್ಕಾರಕ್ಕೆ ಅರಿವಿದೆ. ನನ್ನ ಸರ್ಕಾರವು ಅಂತಹ ಸೌಕರ್ಯಗಳಿಲ್ಲದ ಗ್ರಾಮಗಳಲ್ಲಿ ಸ್ಮಶಾನಗಳನ್ನು ರಚಿಸುವ ಕಾರ್ಯಯೋಜನೆಯನ್ನು ಪ್ರಾರಂಭಿಸುತ್ತಿದೆ.

18. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ಏಳಿಗೆಗಾಗಿ ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ರಕ್ಷಣೆಗಳನ್ನು ಒದಗಿಸಿದ್ದರೂ ಹಾಗೂ ಆರ್ಥಿಕ ಕ್ರಮಗಳನ್ನು ಕೈಗೊಂಡಿದ್ದರೂ ಆಗೊಮ್ಮೆ ಈಗೊಮ್ಮೆ ಅವರ ಮೇಲೆ ದೌರ್ಜನ್ಯ ಪ್ರಸಂಗಗಳು ನಡೆಯುತ್ತಲೇ ಇವೆ. ಈ ದೌರ್ಜನ್ಯಗಳಲ್ಲಿ, ಜೀತ ಪದ್ಧತಿ, ಜಾತಿ ಪೂರ್ವಗ್ರಹ, ಕನಿಷ್ಠಮಜೂರಿ ನೀಡದೇ ಇರುವುದು, ಉದ್ಯೋಗಗಳಲ್ಲಿ ಮೀಸಲಾತಿಯನ್ನು ನಿಗದಿಪಡಿಸಿದ್ದರೂ ಅವರಿಗೆ ಉದ್ಯೋಗಗಳನ್ನು ಕೊಡದೇ ಇರುವುದು ಸೇರಿವೆ. ಮೊದಲು ವ್ಯಕ್ತಿಗತವಾಗಿ ನೋವುಂಟು ಮಾಡಲಾಗುತ್ತಿದ್ದ, ಅವಮಾನಗೊಳಿಸಲಾಗುತ್ತಿದ್ದ ಅಪರಾಧಗಳ ಸ್ವರೂಪ ಈಗ ಬದಲಾಗಿ ಅದು ವ್ಯವಸ್ಥಿತ ಸಾಮೂಹಿಕ ಹಿಂಸಾಚಾರವಾಗಿ ಮಾರ್ಪಡುತ್ತಿದೆ. ನನ್ನ ಸರ್ಕಾರವು ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಕಮೀಷನರ್ ಎಂದು ಕರೆಯಲಾಗುವ ಒಂದು ಉನ್ನತ ಮಟ್ಟದ ಪ್ರಾಧಿಕಾರವನ್ನು ರಚಿಸಲು ಉದ್ದೇಶಿಸಿದೆ. ಸಂವಿಧಾನಾತ್ಮಕ, ಶಾಸನಾತ್ಮಕ ಹಾಗೂ ಆರ್ಥಿಕವಾಗಿ ಒದಗಿಸಿರುವ ರಕ್ಷಣೆಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳ ಮೇಲ್ವಿಚಾರಣೆಯನ್ನು ಮಾಡುವ ಮತ್ತು ಈ ರಕ್ಷಣಾ ಕ್ರಮಗಳ ಸಾಮರ್ಥ್ಯದ ಮೌಲ್ಯಮಾಪನ ಮಾಡುವ ಅಧಿಕಾರ ಈ ಪ್ರಾಧಿಕಾರಕ್ಕೆ ಇರುತ್ತದೆ. ಅಲ್ಲದೆ, ಹಕ್ಕುಗಳನ್ನು ಮತ್ತು ರಕ್ಷಣೆಗಳನ್ನು ನಿರಾಕರಿಸಿದ ಪ್ರಕರಣಗಳ ಬಗ್ಗೆ ಬರುವ ನಿರ್ದಿಷ್ಟ ದೂರುಗಳ ಮತ್ತು ಕಂದುಕೊರತೆಗಳ ಮನವಿಗಳನ್ನು ಸಹ ಈ ಪ್ರಾಧಿಕಾರವು ವಿಚಾರಣೆ ಮಾಡುತ್ತದೆ ಮತ್ತು ಅವುಗಳ ನಿವಾರಣೆಗಾಗಿ ಆದೇಶಗಳನ್ನು ಹೊರಡಿಸುತ್ತದೆ. ನನ್ನ ಸರ್ಕಾರವು, ಕರ್ನಾಟಕದ ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ (ಕುಂದುಕೊರತೆಗಳ ನಿವಾರಣೆ) ವಿಧೇಯಕವನ್ನು ಮಂಡಿಸಲು ಉದ್ದೇಶಿಸಿದೆ.

19. ರಾಜ್ಯ ಸರ್ಕಾರಿ ಸೇವೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನ್ಯಾಯೋಚಿತ ಪ್ರಾತಿನಿಧ್ಯ ದೊರೆಯುವಂತೆ ಮಾಡಲು ನನ್ನ ಸರ್ಕಾರವು ರೋಸ್ಟರ್ ಪದ್ಧತಿಯನ್ನು ಜಾರಿಗೆ ತಂದ ದಿನಾಂಕದಿಂದ ಅಂದರೆ ದಿನಾಂಕ 27-4-1978ರಿಂದಲೇ ಬಡ್ತಿ ಕೋಟಾದಲ್ಲಿರುವ ಬ್ಯಾಕ್‌ಲಾಗ್ ಹುದ್ದೆಗಳು ಎಷ್ಟಿವೆ ಎಂಬುದನ್ನು ನಿರ್ದರಿಸುವ ವಿಧಾನವನ್ನು ಕಾರ್ಯಗತಗೊಳಿಸಲು ನಿರ್ಧರಿಸಿದೆ.

20. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪ್ರತಿಭಾವಂತ ಅಭ್ಯರ್ಥಿಗಳಿಗೆ ಅವರು ವಿಶ್ವವಿದ್ಯಾನಿಲಯದಿಂದ ಹೊರ ಬಂದ ಕೂಡಲೇ ಉದ್ಯೋಗ ನೀಡಬೇಕೆಂಬುದು ನನ್ನ ಸರ್ಕಾರದ ಕಾಳಜಿಯಾಗಿದೆ. ಆದುದರಿಂದ ನನ್ನ ಸರ್ಕಾರವು ಸಂಬಂಧಪಟ್ಟ ನಿಯಮಗಳನ್ನು ಸರಳಗೊಳಿಸಲು ಉದ್ದೇಶಿಸಿದೆ.

21. ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳ ತೊಂದರೆಗಳು ಮತ್ತು ಪರಿಸ್ಥಿತಿಗಳ ಬಗ್ಗೆ ತನಿಖೆ ನಡೆಸಲು ಮತ್ತು ಅವರಿಗಾಗಿಯೇ ಇರುವ ವಿವಿಧ ಕಾರ್ಯಯೋಜನೆಗಳ ಅನುಷ್ಠಾನ ಕಾರ್ಯದ ಮೌಲ್ಯ ನಿರ್ಣಯಿಸಲು ಹಿಂದುಳಿದ ವರ್ಗಗಳ ಖಾಯಂ ಆಯೋಗವೊಂದನ್ನು ನೇಮಕ ಮಾಡಲು ನನ್ನ ಸರ್ಕಾರವು ಉದ್ದೇಶಿಸಿದೆ. ನ್ಯಾಯಮೂರ್ತಿ ಒ.ಚಿನ್ನಪ್ಪ ರೆಡ್ಡಿಯವರ ನೇತೃತ್ವದ 3ನೇ ಹಿಂದುಳಿದ ವರ್ಗಗಳ ಆಯೋಗದ ಶಿಫಾರಸ್ಸುಗಳನ್ನು ನನ್ನ ಸರ್ಕಾರವು ತೀವ್ರವಾಗಿ ಪರಿಶೀಲಿಸುತ್ತಿದೆಯೆಂದು ಈ ಸಂದರ್ಭದಲ್ಲಿ ನಾನು ತಿಳಿಸಬಯಸುತ್ತೇನೆ. ನನ್ನ ಸರ್ಕಾರವು ಮಹಿಳೆಯರ ಮೇಲಿನ ದೌರ್ಜನ್ಯ, ಬಾಲ್ಯವಿವಾಹ ಮತ್ತು ವರದಕ್ಷಿಣೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಗಮನ ಹರಿಸಲು ಕರ್ನಾಟಕ ರಾಜ್ಯ ಮಹಿಳಾ ಖಾಯಂ ಆಯೋಗವೊಂದನ್ನು ರಚಿಸಲು ಸಹ ಉದ್ದೇಶಿಸಿದೆ.

22. ರಾಜ್ಯದ ಅಲ್ಪಸಂಖ್ಯಾತರ ಕ್ಷೇಮಾಭಿವೃದ್ಧಿಗಾಗಿ ನಮ್ಮ ನೆಚ್ಚಿನ ಮಾಜಿ ಪ್ರಧಾನಮಂತ್ರಿ ದಿವಂಗತ ಶ್ರೀಮತಿ ಇಂದಿರಾಗಾಂಧಿಯವರು ಆರಂಭಿಸಿದ್ದ 15 ಅಂಶಗಳ ಕಾರ್ಯಕ್ರಮವನ್ನು ಕಾರ್ಯರೂಪಕ್ಕೆ ತರಲು ನನ್ನ ಸರ್ಕಾರ ಬದ್ಧವಾಗಿದೆ.

23. ನನ್ನ ಸರ್ಕಾರವು, ರಾಜ್ಯದಲ್ಲಿ ಸಂಪೂರ್ಣ ಸಾಕ್ಷರತಾ ಅಂದೋಲವನ್ನು ಆರಂಭಿಸಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಂಪೂರ್ಣ ಸಾಕ್ಷರತೆಯನ್ನು ಸಾಧಿಸಲಾಗಿದೆ. ತುಮಕೂರು, ಬೀದರ್, ಶಿವಮೊಗ್ಗ, ಮತ್ತು ಜಿಜಾಪುರ ಜಿಲ್ಲೆಗಳನ್ನು ಸಹ ಈ ಕಾರ್ಯಕ್ರಮದ ವ್ಯಾಪ್ತಿಗೆ ತರಲಾಗಿದೆ. ಅನಕ್ಷರತೆಯನ್ನು ನಿರ್ಮೂಲಗೊಳಿಸುವುದೇ 8ನೇ ಯೋಜನೆಯ ಮಹತ್ವದ ಗುರಿಯೆಂದು ಗ್ರಹಿಸಲಾಗಿದೆ.

24. ಅಕ್ಕಿ, ಗೋಧಿ, ಸಕ್ಕರೆ ಮತ್ತು ಸೀಮೆಎಣ್ಣೆಯನ್ನು ಸಾರ್ವಜನಿಕ ವಿತರಣೆ ವ್ಯವಸ್ಥೆಯ ಮೂಲಕ ಹಂಚಲಾಗುತ್ತಿದೆ. ದೂರದ ಸ್ಥಳಗಳಲ್ಲಿ ಮನೆ ಬಾಗಿಲಿಗೇ ಸಾರ್ವಜನಿಕ ವಿತರಣೆ ವ್ಯವಸ್ಥೆಯ ವಸ್ತುಗಳನ್ನು ಕೊಂಡೊಯ್ದು ಹಂಚುವ ಕ್ರಮಗಳನ್ನು ನನ್ನ ಸರ್ಕಾರವು ಕೈಗೊಂಡಿದೆ. ಪ್ರತಿವರ್ಷಕ್ಕೆ 6400 ರೂಪಾಯಿಗಿಂತ ಅಧಿಕ ವರಮಾನವಿರದ ಅರ್ಹ ಕುಟುಂಬಗಳನ್ನು ಗುರುತಿಸುವುದಕ್ಕಾಗಿ ಪುನಃ ಸಮೀಕ್ಷೆ ನಡೆಸಲು ಮತ್ತು ಹಸಿರು ಪಡಿತರ ಚೀಟಿಗಳಿಗೆ ಬದಲಾಗಿ ಹೊಸ ಪಡಿತರ ಚೀಟಿ ನೀಡಲು ನನ್ನ ಸರ್ಕಾರ ನಿರ್ಧರಿಸಿದೆ.

25. ಸಂಸತ್ತಿನ ಮುಂದಿರುವ ಸಂವಿಧಾನದ ತಿದ್ದುಪಡಿಯನ್ನು ಮತ್ತು ರಾಜ್ಯದಲ್ಲಿ ಪಂಚಾಯತ್ ರಾಜ್ಯ ಸಂಸ್ಥೆಗಳ ಕಾರ್ಯನಿರ್ವಹಣೆಯಲ್ಲಿ ಕಳೆದ ಐದು ವರ್ಷಗಳಲ್ಲಿ ಗಳಿಸಿದ ಅನುಭವವನ್ನು ದೃಷ್ಟಿಯಲ್ಲಿಟ್ಟುಕೊಂಡು, ನನ್ನ ಸರ್ಕಾರವು ಒಂದು ಕ್ರಾಂತಿಕಾರಕ ಪಂಚಾಯತ್ ರಾಜ್ಯ ವಿಧೇಯಕವನ್ನು ತರಲು ಉದ್ದೇಶಿಸಿದೆ. ಉದ್ದೇಶಿತ ಹೊಸ ವಿಧೇಯಕದಲ್ಲಿ, ರಾಜಕೀಯ ಮತ್ತು ಆಡಳಿತ ವಿಕೇಂದ್ರೀಕರಣವನ್ನು ತರಲು ಮತ್ತು 1991 ರಲ್ಲಿ ನಡೆಸಲಾದ ಇತ್ತೀಚಿಗಿನ ಜನಗಣತಿಯ ಆಧಾರದ ಮೇಲೆ ಮತಕ್ಷೇತ್ರಗಳ ಪುನರ್ವಿಂಗಡಣೆಯ ತರುವಾಯ ಚುನಾವಣೆಗಳನ್ನು ಆದಷ್ಟು ಶೀಘ್ರವಾಗಿ ನಡೆಸಲು ಉದ್ದೇಶಿಸಲಾಗಿದೆ.

26. ಕಾನೂನು ವಿವಾದಗಳನ್ನು ತ್ವರಿತವಾಗಿ ಮತ್ತು ಶೀಘ್ರವಾಗಿ ಇತ್ಯರ್ಥ ಮಾಡುವ ದೃಷ್ಟಿಯಿಂದ, ನನ್ನ ಸರ್ಕಾರ 674 ಲೋಕ ಅದಾಲತ್‌ಗಳನ್ನು ನಡೆಸಿದೆ. ಈ ಯೋಜನೆಗೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ದೊರೆತಿರುವುದರಿಂದ ಮುಂಬರುವ ವರ್ಷಗಳಲ್ಲಿ ಅನೇಕ ವ್ಯಾಜ್ಯ ವಿಷಯಗಳ ಬಗ್ಗೆ ವಿಚಾರಣೆ ನಡೆಸುವ ಸಲುವಾಗಿ ಇನ್ನಷ್ಟು ಲೋಕ ಅದಾಲತ್‌ಗಳನ್ನು ನಡೆಸಲು ನನ್ನ ಸರ್ಕಾರ ಉದ್ದೇಶಿಸಿದೆ.

27. ಸನ್ಮಾನ್ಯ ಸದಸ್ಯರೇ, ಜನತೆಯ ಪ್ರತಿನಿಧಿಗಳಾಗಿ ನೀವು ಹೊಂದಿರುವ ಜವಾಬ್ದಾರಿಗಳನ್ನು ನೀವು ಅರಿತಿದ್ದೀರಿ. ಅಂತೆಯೇ, ಕರ್ನಾಟಕ ವಿಧಾನಮಂಡಲದ ಉನ್ನತ ಪರಂಪರೆಗನುಗುಣವಾಗಿ ನಿಮ್ಮ ಈ ಜವಾಬ್ದಾರಿಗಳನ್ನು ನೀವು ನಿರ್ವಹಿಸುತ್ತೀರಿ. ಅಭಿವೃದ್ಧಿ ಕುರಿತ ಸರ್ಕಾರದ ತತ್ವಗಳನ್ನು ಜನತೆಗೆ ತಲುಪಿಸುವಲ್ಲಿ ನಿಮ್ಮ ಪಾತ್ರ ಪ್ರಮುಖವಾದುದು. ಕಲ್ಯಾಣ ಕ್ರಮಗಳು ಹಾಗೂ ಅಭಿವೃದ್ಧಿಯ ಫಲಗಳು ಜನತೆಗೆ ತಲುಪುವಂತೆ ಮಾಡುವುದಕ್ಕಾಗಿ ರೂಪಿಸಿರುವ ಅನೇಕ ಯೋಜನೆಗಳ ಬಗ್ಗೆ ಇತ್ತೀಚಿನ ಮಾಹಿತಿಯನ್ನು ಜನತೆಗೆ ತಿಳಿಸುವ ಕಾರ್ಯವನ್ನೂ ಕೂಡ ನೀವು ಮಾಡಬೇಕಾಗಿದೆ. ತಮ್ಮ ಚರ್ಚೆಗಳಲ್ಲಿ ಯಶಸ್ಸು ದೊರೆಯಲಿ ಎಂದು ಎಲ್ಲ ಸನ್ಮಾನ್ಯ ಸದಸ್ಯರಿಗೆ ಹಾರೈಸುತ್ತಾ ನನ್ನ ಈ ಭಾಷಣವನ್ನು ಮುಗಿಸುತ್ತೇನೆ.

ಜೈ ಹಿಂದ್, ಜೈ ಕರ್ನಾಟಕ.

ಸದನವು ಮತ್ತೆ 4 ಗಂಟೆ 32 ನಿಮಿಷಕ್ಕೆ ಸಮಾವೇಶಗೊಂಡಿತು

(ಸಭಾಧ್ಯಕ್ಷರಾದ ಶ್ರೀ ಎಸ್.ಎಂ. ಕೃಷ್ಣ ಅವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)

ಕಾರ್ಯದರ್ಶಿಯವರು : ಸನ್ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಪ್ರತಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು : ಪ್ರತಿಯನ್ನು ಸಭೆಯ ಮುಂದಿಡಲಾಯಿತು, ಈಗ ಸಭೆಯು ಮುಂದುವರೆದು, ಸೋಮವಾರ ಬೆಳಿಗ್ಗೆ 11 ಗಂಟೆಗೆ ಮತ್ತೆ ಸಮಾವೇಶವಾಗುತ್ತದೆ.

(ಸದನವು 4 ಗಂಟೆ 33 ನಿಮಿಷಕ್ಕೆ ಮುಕ್ತಾಯವಾಗಿ, ಮತ್ತೆ ದಿನಾಂಕ 24-2-92ನೇ ಸೋಮವಾರ ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)